OS. No.: 141-2013
C.W. :- 1

# ಮಾನ್ಯ 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ-1 ನ್ಯಾಯಾಲಯ, ರಾಯಚೂರು.

ಒ ಎಸ್ ಸಂಖ್ಯೆ **141/2013**

| | |
|---|---|
| ಹೆಸರುಃ | ಶ್ರೀ ಜೈಪಾಲ್ ರೆಡ್ಡಿ |
| ತಂದೆಃ | ಶ್ರೀನಿವಾಸ ರೆಡ್ಡಿ |
| ವಯಸ್ಸುಃ | *37* ವರ್ಷ |
| ಉದ್ಯೋಗಃ | ಆಯುಕ್ತರು., ಆರ್. ಡಿ. ಎ., ರಾಯಚೂರು. |
| ವಿಳಾಸಃ | ರಾಯಚೂರು. |

## ದಿನಾಂಕಃ 05-06-2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು

ನ್ಯಾಯಾಲಯದ ನೀಯೊಗಿ/ ಸಾಕ್ಷಿ ಹೇಳಿಕೆ

ಅಸಲು ದಾವ ಸಂಖ್ಯೆ 141/2013 ಮತ್ತು 192/2014 ರಲ್ಲಿ ನಾನು ನ್ಯಾಯಾಲಯ ನೀಯೊಗಿಯಾಗಿ ನೇಮಕಗೊಂಡಿದೆ. ಉಭಯ ಪಕ್ಷಗಾರ ಮತ್ತು ಅವರ ಪರ ವಕೀಲರು ಹಾಜರು ಇದ್ದರು. ಸೂಚನ ಜ್ಞಾಪನವನ್ನು ಪಾಲನೆ ಮಾಡಿದ್ದೇನೆ.ಆಳತೆಗೆ ಸಹಾಯ ಮಾಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಶ್ರೀ ಬಾಲಪ್ಪ ಗೌಡ ರವರು ಬಂದಿದ್ದರು. ಸದರಿಯವರು ಅವರ ಜೊತೆ ಬಂದಿದ್ದ ಮೋಜಣಿವರೊಂದಿಗೆ ಹ್ಯಾಂಡ್ ಜಿ ಪಿ ಎಸ್ ಮೂಲಕ ಸರ್ವೆ ಮಾಡಿದರು, ಕಟ್ಟಡ ಇಲ್ಲದಿರುವಲ್ಲಿ ಸರಪಳಿ ಬಳಸಿ ಸರ್ವೆ ಮಾಡಿದ್ದರು. ಗಡಿ ಭಾಗಳನ್ನು ಗುರುತಿಸಿಕೊಳ್ಳಲಾಯಿತು. ಯಕ್ಲಾಸಪೂರ ಗ್ರಾಮದ ಸರ್ವೆ ನಂಬರ 124 ಮತ್ತು 125 ಆಗಿದ್ದವು. ಆಳತೆ ಕಾರ್ಯ ಪೂರೈಸಲು ಎರಡು ದಿನಗಳಾದವು, ಆಳತೆ ಕಾರ್ಯ ಪೂರ್ಣಗೊಂಡ ಮೇಲೆ ಪ್ರತಿವಾದಿ ಸಹಿ ಮಾಡಲು ನಿರಾಕರಿಸಿದರು. ಸರ್ವೆಯ ವರದಿ ಮತ್ತು ಲಗತ್ತು ದಾಖಲೆಗಳನು ಪರೀಶಿಲಿಸಿದಾಗ 1969 ರ ಸಾಲಿನಲ್ಲಿ

ಅನುಮೋದನೆಗೊಂಡಿದ್ದ ಬಡಾವಣೆ ಆಗಿದ್ದು ನಕ್ಷೆಯಲ್ಲಿ ಪ್ಲಾಟುಗಳ ನಂಬರ ನಮೊದನೆಯಾಗಿಲ್ಲ. ಬಸವೇಶ್ವರ ಹೌಸಿಂಗ್ ಕೋ. ಅಪರೇಟಿವ್ ಸೊಸೈಟಿ ಬಡಾವಣೆ ಬಾಬ್ತು ಅನೊಮೋದನೆ ಆಗದಿರುವ ನಕ್ಷೆ ಇದೆ. ಸದರಿ ನಕ್ಷೆಯಲ್ಲಿ ತೋರಿಸಿರುವ ಪ್ಲಾಟುಗಳೂ ಅನುಮೋದನೆಗೊಂಡಿಲ್ಲ. ಪ್ಲಾಟುಗಳ ಬಾಬ್ತು ಕ್ರಯ ಪತ್ರಗಳು ಅನುಮೋದನೆ ಆಗದಿರುವ ಸದರಿ ನಕ್ಷೆಯ ಪ್ಲಾಟುಗಳ ಸಂಖ್ಯೆಯಂತೆಯೇ ಆಗಿವೆ. ಹೀಗಿರುವಾಗ ಅತೀಕ್ರಮ ಆಗಿದೆಯೇ ಇಲ್ಲವೆ ಎಂದು ಗುರುತಿಸಲು ಸಾಧ್ಯವಿಲ್ಲ ನಾನು ನನ್ನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಸಲ್ಲಿಸಿರುವ ವರದಿಯನ್ನು ಅದರೊಂದಿಗಿರುವ ಲಗತ್ತುಗಳ ಸೇರಿ ಸಿ.ಡಬ್ಲೂ.-1 ಎಂದು ಗುರುತಿಸಲಾಯಿತು. ನಗರ ಗ್ರಾಮಾಂತರ ಯೋಜನೆ ನಿರ್ದೇಶಕರು, ಬೆಂಗಳೂರು ಕಛೇರಿಯಿಂದ ಪಡೆದ ನಕ್ಷೆಯ ದೃಢಿಕೃತ ಪ್ರತಿಯನ್ನು ವರದಿಯೊಂದಿಗೆ ಸಲ್ಲಿಸಿದ್ದು ಸಿ.ಡಬ್ಲೂ-2 ಎಂದು ಗುರುತಿಸಲಾಯಿತು. ಅನುಮೋದನೆಗೊಂಡಿರದ ಬಸವೇಶ್ವರ ಕೋ. ಅಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್, ರಾಯಚೂರು ರವರ ಪ್ಲಾಟುಗಳ ನಕ್ಷೆಯ ಪ್ರತಿ ಹಾಜರು ಪಡಿಸಿದ್ದು ಇದನ್ನು ಸಿ.ಡಬ್ಲೂ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

( ವಾದಿ ಪರ ವಕೀಲರು ಸಮಯಾವಕಾಶ ಕೇಳಿದ ಕಾರಣ ಮುಂದೂಡಲಾಯಿತು)

( **ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.**)

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**